UASB Library
Newspaper Clippings
Saturday 04 -06-2022 Pg .1
Jai Kisan

ಬಿತ್ತನೆ ಬೀಜ ವಿಮೆ ಸಂಶೋಧನೆಗೆ ಪಿನ್‌ಟೆಕ್ ಸಂಸ್ಥೆ ಒಡಂಬಡಿಕೆ



ಬೆಂಗಳೂರು, ಜೂ.3- ಬಿತ್ತನೆ ಬೀಜ ಉತ್ಪಾದಿಸುವ ರೈತರಿಗೆ ಅಂತರಿಕ ಮತ್ತು ಬಾಹ್ಯ ಮೂಲಗಳಿಂದ ಆದಾಯದಲ್ಲಿ ಉಂಟಾಗುವ ನಷ್ಟದಿಂದ ರಕ್ಷಿಸುವ ನಿಟ್ಟಿನಲ್ಲಿ ಸಂಶೋಧನಾ ಪ್ರಯೋಗಕ್ಕೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಗ್ರಾಮ ಪಾಠಶಾಲ ಫಿನ್‌ಟೆಕ್ ಖಾಸಗಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ.

ಇದು ದೇಶದಲ್ಲೇ ಮೊಟ್ಟಮೊದಲ ವಿನೂತನ ಪ್ರಯತ್ನವಾಗಿದೆ. ಈ ಒಡಂಬಡಿಕೆಯಲ್ಲಿ ವೈಜ್ಞಾನಿಕ ಬೀಜೋತ್ಪಾದನೆ ಮತ್ತು ಆಧುನಿಕ ಕೃಷಿ ಪದ್ಧತಿಗಳ ಕಿರು ವಿಡಿಯೋಗಳನ್ನು ತಯಾರಿಸಿ ತಂತ್ರಜ್ಞಾನಗಳ ತ್ವರಿತ ವರ್ಗಾವಣೆಗೆ ಚಾಲನೆ ನೀಡುವುದು, ರೈತರಿಗೆ ಮೊಬೈಲ್ ಅಪ್ಲಿಕೇಶನ್ ಮೂಲಕ ಸಲಹೆ ನೀಡುವುದು ಹಾಗೂ ಮಾರುಕಟ್ಟೆ ಮತ್ತು ಮೂಲ ಬಂಡವಾಳ ಒದಗಿಸುವ ಉದ್ದೇಶ ಹೊಂದಲಾಗಿದೆ.

ಒಡಂಬಡಿಕೆ ಕಾರ್ಯಕ್ರಮವನ್ನು ಜಿಕೆವಿಕೆಯ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಕುಲಪತಿಗಳಾದ ಡಾ.ಎಸ್.ರಾಜೇಂದ್ರಪ್ರಸಾದ್, ಕುಲಸಚಿವ ಡಾ.ಬಸವೇಗೌಡ, ಶಿಕ್ಷಣ ನಿರ್ದೇಶಕ ಡಾ.ಕೆ.ಸಿ. ನಾರಾಯಣ ಸ್ವಾಮಿ, ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣ ಗೌಡ, ಸಂಶೋಧನಾ ನಿರ್ದೇಶಕ ಡಾ.ವೈ.ಜಿ.ಷಡಕ್ಷರಿ ಮತ್ತು ಗ್ರಾಮ ಪಾಠಶಾಲಾ ಫಿನ್‌ಟೆಕ್ ಸಂಸ್ಥೆಯ ಸಹ ಸಂಸ್ಥಾಪಕ ಡಾ.ರವಿಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಭಾರತದ ಚಹಾದ ತಿರಸ್ಕಾರಕ್ಕೆ ಕಾರಣವಾದ ಅಂಶ ಯಾವುದು..?

ಹಲವು ದೇಶಗಳಿಂದ ಭಾರತದ ಚಹಾ ತಿರಸ್ಕಾರ

ಈ ಸಂಜೆ
ಶುಕ್ರವಾರ, 03 ಜೂನ್, 2022

ನವದೆಹಲಿ: ಅಂತಾರಾಷ್ಟ್ರೀಯ ಮಾರುಕಟ್ಟೆಯಿಂದ ಭಾರತದ ಚಹಾಕ್ಕಿರುವ ಬೇಡಿಕೆ ದೂರವಾಗುತ್ತಿದೆ. ಚಹಾ ಬೆಳೆಗಾರರಿಗೆ ಇದು ಆಘಾತಕಾರಿ ವಿಚಾರವಾದರೆ ಚಹಾವನ್ನು ಖರೀದಿ ಮಾಡುವ ಗ್ರಾಹಕನಿಗೆ ಇದು ಆರೋಗ್ಯದ ವಿಚಾರವಾಗಿದೆ.

ಹೌದು, ನಿಗದಿತ ಪ್ರಮಾಣಕ್ಕಿಂತಲೂ ಅತಿಯಾದ ಕೀಟನಾಶಕ ಮತ್ತು ರಾಸಾಯನಿಕ ಇರುವ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಮತ್ತು ದೇಶೀಯ ಖರೀದಿದಾರರು ಭಾರತದ ಚಹಾವನ್ನು ತಿರಸ್ಕರಿಸಿದ್ದಾರೆ ಎಂದು ಭಾರತೀಯ ಚಹಾ ರಫ್ತುದಾರರ ಸಂಘದ (ಐಟಿಇಎ) ಅಧ್ಯಕ್ಷ ಅಂಶುಮಾನ್ ಕನೋರಿಯಾ ಶುಕ್ರವಾರ ಹೇಳಿದ್ದಾರೆ. ನೆರೆಯ ಶ್ರೀಲಂಕಾ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ, ವಿದೇಶಿ ಮಾರುಕಟ್ಟೆಯಲ್ಲಿ ಸಮಸ್ಯೆ ಎದುರಿಸುತ್ತಿದೆ. ಹೀಗಾಗಿ ಮಾರುಕಟ್ಟೆಯಲ್ಲಿ ಸೃಷ್ಟಿಯಾಗಿರುವ ನಿರ್ವಾತದ ಲಾಭ ಪಡೆದು, ಚಹಾದ ರಫ್ತನ್ನು ಹೆಚ್ಚಿಸುವತ್ತ ಭಾರತದ ಟೀ ಬೋರ್ಡ್ ಕಣ್ಣಿಟ್ಟಿದೆ. ಆದರೆ, ಕೀಟನಾಶಕ ಮತ್ತು ರಾಸಾಯನಿಕಗಳು ಹೆಚ್ಚಾಗಿರುವ ಕಾರಣದಿಂದಾಗಿ ಚಹಾ ತಿರಸ್ಕಾರ ಗೊಳ್ಳುತ್ತಿದ್ದು, ಟೀ ಬೋರ್ಡ್‌ನ ನಿರೀಕ್ಷೆಗೆ ತಣ್ಣೀರೆರಚಿದಂತಾಗಿದೆ.

ಅನೇಕ ದೇಶಗಳು ಚಹಾದ ಆಮದಿಗೆ ಕಟ್ಟುನಿಟ್ಟಾದ ನಿಯಮಗಳನ್ನು ಅನುಸರಿಸುತ್ತಿವೆ. ಹೆಚ್ಚಿನ ದೇಶಗಳು ಯೂರೋಪ್ (ಇಯು) ಮಾನದಂಡಗಳನ್ನು ಅನುಸರಿಸುತ್ತವೆ. ಇದು ಎಫ್‌ಎಸ್‌ಎಸ್‌ಎಐ ಗಿಂತಲೂ ಹೆಚ್ಚು ಕಠಿಣವಾಗಿವೆ ಎಂದು ಕನೋರಿಯಾ ಹೇಳಿದ್ದಾರೆ. ಕಾನೂನು ಅನುಸರಿಸುವ ಬದಲು, ಎಫ್‌ಎಸ್‌ಎಸ್‌ಎಐ ಮಾನದಂಡಗಳನ್ನು ಉದಾರಗೊಳಿಸುವಂತೆ ಅನೇಕರು ಸರಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದು ತಪ್ಪು ಸಂದೇಶ ರವಾನಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಕೀಟನಾಶಕ ಮತ್ತು ರಾಸಾಯನಿಕದ ಬಗ್ಗೆ ಟೀ ಪ್ಯಾಕರ್‌ಗಳು ಮತ್ತು ರಫ್ತುದಾರರಿಂದ ದೂರುಗಳು ಬಂದಿವೆ ಎಂದು ಟೀ ಬೋರ್ಡ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಅಧಿಕ ರಾಸಾಯನಿಕ ಬಳಕೆ

ದೇಶದಲ್ಲಿ ಮಾರಾಟವಾಗುವ ಎಲ್ಲಾ ಬಗೆಯ ಚಹಾ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮಾನದಂಡಗಳಿಗೆ ಅನುಗುಣವಾಗಿರಬೇಕು. ಆದರೆ, ಹೆಚ್ಚಿನ ಖರೀದಿದಾರರು ರಾಸಾಯನಿಕ ಅಂಶ ಅಧಿಕವಾಗಿರುವ ಚಹಾವನ್ನು ಖರೀದಿಸುತ್ತಿದ್ದಾರೆ ಎಂದು ಕನೋರಿಯಾ ಪಿಟಿಐಗೆ ತಿಳಿಸಿದರು. 2021 ರಲ್ಲಿ ಭಾರತವು 195.90 ದಶಲಕ್ಷ ಕೆ.ಜಿ ಚಹಾವನ್ನು ರಫ್ತು ಮಾಡಿದೆ. ಭಾರತದ ಚಹಾಕ್ಕೆ ಕಾಮನ್‌ವೆಲ್ತ್ ರಾಷ್ಟ್ರಗಳು ಮತ್ತು ಇರಾನ್ ಪ್ರಮುಖ ಗ್ರಾಹಕ. ಈ ವರ್ಷ 300 ದಶಲಕ್ಷ ಕೆ.ಜಿ ಚಹಾವನ್ನು ರಫ್ತು ಮಾಡುವ ಗುರಿಯನ್ನು ಟೀ ಮಂಡಳಿ ಹೊಂದಿದೆ.

04-06-2022
Vsv Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

14ರಿಂದ ಆನ್‌ಲೈನ್ ತರಬೇತಿ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿ ತರಬೇತಿ ಘಟಕ ಹಾಗೂ ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಆಶ್ರಯದಲ್ಲಿ ಜೂನ್ 14ರಿಂದ 16ರ ತನಕ ಕೃಷಿ ಮಾರುಕಟ್ಟೆ ಮಾಹಿತಿ ಕುರಿತು ಆನ್‌ಲೈನ್ ತರಬೇತಿ ಹಮ್ಮಿಕೊಳ್ಳಲಾಗಿದೆ.

ಆಸಕ್ತ ಪ್ರಗತಿಪರ ರೈತರು, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ವಿಸ್ತರಣಾ ಕಾರ್ಯಕರ್ತರು, ಇದೇ 11ರ ಒಳಗೆ 'ಮ್ಯಾನೇಜ್'ನ ವೆಬ್‌ಸೈಟ್‌ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬಹುದು.

ತರಬೇತಿಯಲ್ಲಿ ಕೃಷಿ ಮಾರುಕಟ್ಟೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರದ ನೀತಿಗಳು, ಪೂರೈಕೆ ಸರಪಳಿ, ಇ-ಟ್ರೇಡಿಂಗ್, ಇ-ನಾಮ್, ಕೃಷಿ ಪೋರ್ಟಲ್, ಕೃಷಿ ಉತ್ಪನ್ನಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ ವಿಷಯ ಕುರಿತು ತಿಳಿಸಲಾಗುವುದು. ತರಬೇತಿಯಲ್ಲಿ ಭಾಗವಹಿಸಿದವರಿಗೆ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು. ಮಾಹಿತಿಗೆ ಸಿಬ್ಬಂದಿ ತರಬೇತಿ ಘಟಕದ ಸಂಯೋಜಕ ಡಾ.ಕೆ.ಶಿವರಾಮು ಅವರನ್ನು ಸಂಪರ್ಕಿಸಬಹುದು.

ಪ್ರಜಾವಾಣಿ
ಶನಿವಾರ • ಜೂನ್ 4, 2022

MoU signed for seed insurance

STAFF REPORTER
BENGALURU

A Memorandum of Understanding for insurance of seeds was entered into between University of Agricultural Sciences, Bangalore (UAS-B), GKVK campus, and Gram Paathshala Fintech Private Ltd. on Friday.

BENGALURU THE HINDU
SATURDAY, JUNE 4, 2022

04-06-2022 Hd Pg 06

ನ್ಯಾನೋ ಯೂರಿಯಾ ದ್ರಾವಣದಲ್ಲಿ ನ್ಯಾನೋ ಕಣಗಳು ಸೂಕ್ಷ್ಮವಾಗಿರುವ ಕಾರಣ ಗಿಡಗಳ ಬೇರುಗಳು ಪರಿಣಾಮಕಾರಿಯಾಗಿ ಹೀರಿಕೊಳ್ಳುತ್ತವೆ.

ನ್ಯಾನೋ ಯೂರಿಯಾ ಏನಾದ್ರೂ ಕ್ರಾಂತಿ ಮಾಡುತ್ತದೆಯೇ?



ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com

ಇಫ್ಕೋ ಸಂಸ್ಥೆಯ ದ್ರವ ರೂಪದ ನ್ಯಾನೋ ಯೂರಿಯಾ ''ಭಾರತ ಸರ್ಕಾರದ ರಸಗೊಬ್ಬರ ನಿಯಂತ್ರಣ ಕಾಯ್ದೆ 1985''ರಲ್ಲಿ ಸೇರ್ಪಡೆಯಾಗಿ ಲೋಕಾರ್ಪಣೆಗೊಂಡ ನ್ಯಾನೋ ಗೊಬ್ಬರ. ಗುಜರಾತ್‌ನಕಲೋಲ್‌ನಲ್ಲಿರುವನ್ಯಾನೋ ಬಯೋಟೆಕ್ನಾಲಜಿಸಂಶೋಧನಾ ಕೇಂದ್ರದಲ್ಲಿ ಇದನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಸಂಸ್ಥೆಯ ಸ್ವಾಮ್ಯದ ವೇಟೆಂಟೆಡ್ ಉತ್ಪನ್ನ. ಶೇಕಡಾ 4ರಷ್ಟು ನ್ಯಾನೋ ಸಾರಜನಕ ಕಣಗಳನ್ನು ಹೊಂದಿದೆ. 94 ವಿವಿಧ ಬೆಳೆಗಳ ಮೇಲೆ ಪ್ರಯೋಗಗಳನ್ನು ಮಾಡಲಾಗಿದೆ ಹಾಗೂ ರಾಜ್ಯ ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ 11 ಸಾವಿರ ರೈತರ ತಾಕುಗಳಲ್ಲಿ ಪ್ರಯೋಗಗಳನ್ನು ಮಾಡಿದೆ. ಒಂದು ಬಾಟಲ್ (500 ಮಿ.ಲಿ) ದ್ರವರೂಪದ ನ್ಯಾನೋ ಯೂರಿಯಾ ಬಳಕೆಯಿಂದ ವಿವಿಧ ಬೆಳೆಗಳಿಗೆ ಶಿಫಾರಿತ ಯೂರಿಯಾ (ಹರಳು) ಬಳಕೆಯ ಶೇ.50ರಷ್ಟು ಉಳಿತಾಯ ಮಾಡಬಹುದೆಂದು ಇಫ್ಕೋ ಸಂಸ್ಥೆ ಹೇಳುತ್ತದೆ. ಈಗಾಗಲೇ ಈ ನ್ಯಾನೋ ಯೂರಿಯಾ ಉತ್ಪನ್ನವು ಇಫ್ಕೋ ಇ-ಕಾಮರ್ಸ್ ವೇದಿಕೆ [www.iffcobazar.in] ಸೇರಿದಂತೆ ಸಹಕಾರ ಮಾರಾಟ ಮತ್ತು ಮಾರುಕಟ್ಟೆಗಳ ಮೂಲಕ ರೈತರಿಗೆ ಲಭ್ಯವಿರುತ್ತದೆ.

ಎನಿದು ನ್ಯಾನೋ ಯೂರಿಯಾ ದ್ರಾವಣ?

500 ಮಿಲಿ ಬಾಟಲಿಯಲ್ಲಿ 40,000 ಪಿ.ಪಿ.ಎಂ. ಸಾರಜನಕವನ್ನು ಹೊಂದಿರುತ್ತದೆ. ಯೂರಿಯಾದ ಒಂದು ಚೀಲದಿಂದ ಒದಗಿಸುವ ಹರಳು ರೂಪದ ಸಾರಜನಕ ಪೋಷಕಾಂಶಕ್ಕೆ ಸಮನಾಗಿರುತ್ತದೆ ಹಾಗೂ ನ್ಯಾನೋ ಯೂರಿಯಾ ದ್ರಾವಣದಲ್ಲಿ ನ್ಯಾನೋ ಕಣಗಳು ಸೂಕ್ಷ್ಮವಾಗಿರುವ ಕಾರಣ ಗಿಡಗಳ ಬೇರುಗಳು ಪರಿಣಾಮಕಾರಿಯಾಗಿ ಹೀರಿಕೊಳ್ಳುತ್ತವೆ. ಮೇಲ್ಭಾಗದಲ್ಲಿ ಸಿಂಪಡಿಸಿದರೆ ಬೇರು ಮಟ್ಟದವರೆಗೆ ತಲುಪುತ್ತದೆ. ರೈತರು ಯೂರಿಯಾ ಚೀಲಗಳನ್ನು ಟ್ರ್ಯಾಕ್ಟರ್ ಅಥವಾ ಲಘುವಾಹನಗಳಲ್ಲಿ ಸಾಗಾಣಿಕೆ ಮಾಡಬೇಕಾಗುತ್ತದೆ. ಆದರೆ ನ್ಯಾನೋ ಯೂರಿಯಾವನ್ನು ಕೈಚೀಲದಲ್ಲಿ ಒಯ್ಯಬಹುದಾಗಿದೆ. 500 ಮಿಲಿ (ಅರ್ಧ ಲೀಟರ್) ಬಾಟಲಿಗೆ ಅಂದಾಜು 250 ರೂಪಾಯಿಗಳು. ಇದು ಸಂಪ್ರದಾಯಿಕ ಯೂರಿಯಾ ಚೀಲದ ಬೆಲೆಗಿಂತ ಶೇ. 10 ರಷ್ಟು ಅಗ್ಗ. ನ್ಯಾನೋ ಯೂರಿಯಾ (ದ್ರವ) ಒಂದು ವಿಶಿಷ್ಟವಾದ ಸಾರಜನಕವನ್ನು ಒದಗಿಸುವ ಗೊಬ್ಬರ. ಸಾರಜನಕವು ಸಸ್ಯದ ಪತ್ರ ಹರಿತ್ತಿನ, ಪ್ರೊಟೋ ಪ್ಲಾಸಂ, ಪ್ರೋಟಿನ್ ಹಾಗೂ ನ್ಯೂಕ್ಲಿಕ್ ಆಮ್ಲದ ಒಂದು ಭಾಗವಾಗಿದೆ. ಇದು ಗಿಡದ ಹಸಿರು ಬಣ್ಣಕ್ಕೆ, ಒಳ್ಳೆಯ ಬೆಳವಣಿಗೆಗೆ, ಒಟ್ಟಾರೆ ಬೆಳವಣಿಗೆಗೆ ಮತ್ತು ಸಸ್ಯದ ಅಭಿವೃದ್ಧಿಗೆ ಕಾರಣವಾಗಿರುತ್ತದೆ. ಭಾರತದ ಬಹುತೇಕ ಮಣ್ಣುಗಳಲ್ಲಿ ಸಾರಜನಕದ ಕೊರತೆ ಇದೆ. ರೈತರು ಯೂರಿಯಾ ಗೊಬ್ಬರವನ್ನು ಸಾಮಾನ್ಯವಾಗಿ 2-3 ಪಾಲು ಮಾಡಿ, ಭೂಮಿ ಸಿದ್ಧಪಡಿಸುವ ಹಂತದಲ್ಲಿಮತ್ತು ಒಂದು ತಿಂಗಳ ನಂತರ ಮೇಲ್ಗೊಬ್ಬರವಾಗಿ ಒದಗಿಸುತ್ತಾರೆ. ಆದರೆ ಸಸ್ಯಗಳು ಹಾಕಿದ ಗೊಬ್ಬರದ ಕೇವಲ ಶೇ.30-50 ರಷ್ಟು ಮಾತ್ರ ಬಳಸಿಕೊಳ್ಳುತ್ತವೆ. ಉಳಿದ ಗೊಬ್ಬರ ಅಮೋನಿಯಾ ಅಥವಾ ನೈಟ್ರಸ್ ಆಕ್ಸೈಡ್ ಅಥವಾ ನೈಟ್ರೇಟ್ ರೂಪದಲ್ಲಿ ನಷ್ಟವಾಗುತ್ತದೆ. ಇದರಿಂದ ಮಣ್ಣು, ನೀರು ಮತ್ತು ವಾಯುವಿನ ಮಾಲಿನ್ಯವಾಗುತ್ತದೆ. ಶಿಫಾರಸ್ಸಿಗಿಂತ ಅಧಿಕ ಪ್ರಮಾಣದಲ್ಲಿ ಯೂರಿಯಾ ಗೊಬ್ಬರವನ್ನು ಬಳಸುವುದರಿಂದ ರೋಗ ಮತ್ತು ಕೀಟಬಾಧೆ ಹೆಚ್ಚಾಗುತ್ತದೆ. ಬೆಳೆ ಅವಧಿ ವಿಸ್ತರಣೆ, ಪೋಷಕಾಂಶಗಳ ಕೊರತೆ ಮುಂತಾದ ಸಮಸ್ಯೆಗಳು ಕಾಣಬಹುದು.

ನ್ಯಾನೋ ಯೂರಿಯಾ ಎನ್ನುವ ವಿಸ್ಮಯತನ ಗೊಬ್ಬರ

- ಚಿಕ್ಕ ಗಾತ್ರದ ಕಣಗಳನ್ನು ಹೊಂದಿರುವ ದ್ರವ ರೂಪದ ನ್ಯಾನೋ ಯೂರಿಯಾ (20-50 nm) ಬಳಸುವುದರಿಂದ ಬೆಳೆಯು ಶೇಕಡಾ 80 ರಷ್ಟು ಬಳಸಿಕೊಳ್ಳುತ್ತವೆ.
- ಇದು ಗಿಡಕ್ಕೆ ಬೇಕಾಗಿರುವ ಸಾರಜನಕವನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುತ್ತದೆ. ಇದರಿಂದ ಗಿಡಗಳ ಉತ್ತಮ ಬೆಳವಣಿಗೆ ಜೊತೆಗೆ ಬೇರು ಬೆಳವಣಿಗೆಯಾಗುತ್ತವೆ.
- ಇದು ಸಸ್ಯಗಳೊಳಗಿನ ಸಾರಜನಕ ಮತ್ತು ಇತರ ಪೋಷಕಾಂಶಗಳನ್ನು ತೆಗೆದುಕೊಳ್ಳುವ ಮತ್ತು ಸಂಯೋಜಿಸುವ ಮಾರ್ಗಗಳನ್ನು ಪ್ರಚೋದಿಸುತ್ತದೆ.
- ಕಟಾವು ಮಾಡಿದ ಬೆಳೆಗಳಲ್ಲಿ ಪೋಷಕಾಂಶಗಳ ಪ್ರಮಾಣವನ್ನು ಹೆಚ್ಚಿಸುತ್ತದೆ.
- ಇದು ಬೆಳೆ ಉತ್ಪಾದಕತೆಯನ್ನು ಹೆಚ್ಚಿಸಿ, ವೆಚ್ಚವನ್ನು ಕಡಿಮೆ ಮಾಡುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುತ್ತದೆ.
- ಸಾಮಾನ್ಯವಾಗಿ ಬಳಸುತ್ತಿದ್ದ ಯೂರಿಯಾ ಗೊಬ್ಬರದ ಶೇ. 50ರಷ್ಟು ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ನ್ಯಾನೋ ಯೂರಿಯಾವನ್ನು ಬಳಸಬಹುದು.
- ದ್ರವ ರೂಪದಲ್ಲಿ ಇರುವ ಕಾರಣ ರೈತರು ಇದನ್ನು ಸುಲಭವಾಗಿ ಶೇಖರಿಸಿ, ಸಾಗಾಣಿಕೆ ಮಾಡಬಹುದು.
- ಇದು ಮಣ್ಣು, ಗಾಳಿ ಮತ್ತು ನೀರಿನ ಗುಣಮಟ್ಟವನ್ನು ಕಾಪಾಡುವುದರಲ್ಲಿ ಸಹಕರಿಸುತ್ತದೆ.



ನ್ಯಾನೋ ಯೂರಿಯಾದ ಉಪಯೋಗಗಳು

- ಇದು ನೀರಿನಲ್ಲಿ ಸಮವಾಗಿ ಹರಡಿದ ಶೇಕಡಾ 4ರಷ್ಟು ಒಟ್ಟು ಸಾರಜನಕವನ್ನು ಹೊಂದಿರುತ್ತದೆ.
- ನ್ಯಾನೋ ಸಾರಜನಕ ಕಣದ ಗಾತ್ರವು 20ರಿಂದ 50 ನ್ಯಾನೋ ಮೀಟರ್ ವರೆಗೆ ಇರುತ್ತದೆ.
- ನ್ಯಾನೋ ಯೂರಿಯಾದಲ್ಲಿನ ಸಾರಜನಕವು ಸಸ್ಯದೊಳಗೆ ಹೈಡ್ರೋಲಿಸಿಸ್ ಆಗಿ ಅಮೋನಿಯಾಕಲ್ ಮತ್ತು ನೈಟ್ರೇಟ್ ರೂಪದಲ್ಲಿ ಪರಿವರ್ತನೆಗೊಳ್ಳುತ್ತದೆ.

ನ್ಯಾನೋ ಯೂರಿಯಾ ಬಳಕೆ ಹೇಗೆ?

- ರೈತರು ತಮ್ಮ ಬೆಳೆಗೆ ಕೊಡುವ ಮೂಲ ಗೊಬ್ಬರ ಅಥವಾ ತಳ ಗೊಬ್ಬರದಲ್ಲಿ ಯಾವುದೇ ಬದಲಾವಣೆ ಮಾಡಬಾರದು.
- ಮೇಲು ಗೊಬ್ಬರವಾಗಿ 2ರಿಂದ 4 ಮಿ.ಲೀ. ನ್ಯಾನೋ ಯೂರಿಯಾವನ್ನು ಒಂದು ಲೀ. ನೀರಿನಲ್ಲಿ ಮಿಶ್ರಣ ಮಾಡಿ ಬೆಳೆಯ ಎಲೆಗಳ ಮೇಲೆ ಸಿಂಪಡಿಸಬೇಕು.
- ಸಾಧ್ಯವಾದರೆ ಎರಡು ಬಾರಿ ಸಿಂಪರಣೆ ಮಾಡಿ
- ಮೊದಲ ಸಿಂಪಡಣೆ : ಮೊಳಕೆ ಹೊಡೆದ 30-35 ದಿನಗಳ ನಂತರ ಅಥವಾ ನಾಟಿ ಮಾಡಿದ 20-25 ದಿನಗಳ ನಂತರ (ಸಕ್ರಿಯ ಬೆಳವಣಿಗೆ ಅಥವಾ ಕವಲೊಡೆಯುವ ಹಂತ)
- ಎರಡನೇ ಸಿಂಪಡಣೆ : ಹೂ ಬರುವ ಮುಂಚಿತವಾಗಿ ಅಥವಾ 20-25 ದಿನಗಳ ಅಂತರದಲ್ಲಿ ಸಿಂಪಡಿಸಿ.
- ಬೆಳೆ ಮತ್ತು ಅದರ ಸಾರಜನಕದ ಅಗತ್ಯವನ್ನು ಅವಲಂಬಿಸಿ ಸಿಂಪಡಿಸುವ ಸಂಖ್ಯೆಯನ್ನು ಹೆಚ್ಚಿಸಬಹುದು ಅಥವಾ ಕಡಿಮೆ ಮಾಡಬಹುದು.

ನ್ಯಾನೋ ಯೂರಿಯಾ ಹೇಗೆ ಕೆಲಸ ಮಾಡುತ್ತದೆ?

- ಎಲೆಗಳ ಮೇಲೆ ಸಿಂಪಡಿಸಿದಾಗ, ನ್ಯಾನೋ ಯೂರಿಯಾ ಸುಲಭವಾಗಿ ಸ್ಟೊಮಾಟಾ ಮತ್ತು ಇತರ ರಂಧ್ರಗಳ ಮೂಲಕ ಪ್ರವೇಶಿಸಿ ಸಸ್ಯಕೋಶಗಳಲ್ಲಿ ಸೇರಿಕೊಳ್ಳುತ್ತದೆ.
- ಆಹಾರ ಸಾಗಿಸುವ ನಾಳವಾದ ಫ್ಲೋಯಂ ಮುಖಾಂತರ ಎಲೆಯಿಂದ ಕಾಯಿ, ಕಾಳುಗಳು ಮತ್ತು ಹೂಗಳಿಗೆ ತಲುಪುತ್ತದೆ.
- ಉಪಯೋಗವಾಗದೇ ಉಳಿದ ಸಾರಜನಕ ವ್ಯಾಕ್ಯುಯೊಲ ಗಳಲ್ಲಿ ಸಂಗ್ರಹವಾಗಿರುತ್ತದೆ ಮತ್ತು ಗಿಡಕ್ಕೆ ಬೇಕಾದಾಗ ನಿಧಾನವಾಗಿ ದೊರಕುತ್ತದೆ.

ಬಳಕೆ ಮತ್ತು ಎಚ್ಚರಿಕೆ

- ಸಿಂಪಡಣೆಗೂ ಮುನ್ನ ನ್ಯಾನೋ ಯೂರಿಯಾ ಬಾಟಲ್‌ನ್ನು ಚೆನ್ನಾಗಿ ಅಲ್ಲಾಡಿಸಬೇಕು.
- ಮುಂಜಾನೆ ಅಥವಾ ಸಾಯಂಕಾಲದ ಸಮಯದಲ್ಲಿ ಸಿಂಪಡಣೆ ಮಾಡಬೇಕು.
- ಸಿಂಪಡಣೆ ಮಾಡಿದ 12 ಘಂಟೆಯ ಒಳಗಾಗಿ ಮಳೆಯಾದಲ್ಲಿ ಪುನಃ ಸಿಂಪಡಣೆ ಮಾಡಲೇ ಬೇಕು.
- ನ್ಯಾನೋ ಯೂರಿಯಾವನ್ನು ಜೈವಿಕ ಸಸ್ಯ ಪ್ರಚೋದಕಗಳ ಜೊತೆಗೆ, ಸಂಪೂರ್ಣ ನೀರಿನಲ್ಲಿ ಕರಗುವ ಗೊಬ್ಬರ ಮತ್ತು ಕೃಷಿ ರಸಾಯನಗಳೊಂದಿಗೆ ಮಿಶ್ರಣ ಮಾಡಿ ಬಳಸಬಹುದು.

ಬಳಸುವ ಮುನ್ನ ಅನುಸರಿಸಬೇಕಾದ ಸೂಚನೆಗಳು

ಎಲೆಗಳ ಮೂಲಕ ಪ್ರವೇಶ; ನೀರನ್ನು ಹೊರ ಸೂಸುವ ಹೊರ ಪರೆಯ ಮೇಲಿನ ಸಣ್ಣ ರಂಧ್ರಗಳ ಮೂಲಕ ತಮ್ಮ ಆಹಾರವನ್ನು ಕಂಡುಕೊಳ್ಳುತ್ತವೆ.

ಬೇರಿನ ಮೂಲಕ ಪ್ರವೇಶ; ಬೇರಿನ ತುದಿ ಪಾರ್ಶ್ವ ಬೇರುಗಳು ಸಣ್ಣ ಬೇರುಗಳು ಹೀಗೆ ಏನೆಲ್ಲಾ ರೀತಿಯ ಬೇರುಗಳಿದ್ದರೂ ಮೂಲ ಬೇರಿನ ಅಗತ್ಯ ತುಂಬಾ ಮುಖ್ಯ. ಅವುಗಳ ಪೋಷಣೆ ನಿಮ್ಮದೇ.

ಕೀಟನಾಶಕ ಮತ್ತು ರೋಗನಾಶಕಗಳೊಡನೆ ಮಿಶ್ರಣ ಮಾಡುವಾಗ ಜಾರ್ ಪರೀಕ್ಷೆ ಮಾಡಿದ ನಂತರ ಸಿಂಪಡಣೆ ಮಾಡುವುದು ಸೂಕ್ತ. ಉತ್ತಮ ಫಲಿತಾಂಶಕ್ಕಾಗಿ ನ್ಯಾನೋ ಯೂರಿಯಾ ತಯಾರಾದ ದಿನಾಂಕದಿಂದ ಎರಡು ವರ್ಷದ ಒಳಗೆ ಉಪಯೋಗಿಸಬೇಕು.

ಸುರಕ್ಷತಾ ಮುನ್ನೆಚ್ಚರಿಕೆ

- ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಮತ್ತು ಐ.ಇ.ಸಿ.ಡಿ ಅಂತಾರಾಷ್ಟ್ರೀಯ ಮಾರ್ಗಸೂಚಿಗಳ ಪ್ರಕಾರ ನ್ಯಾನೋ ಯೂರಿಯಾವನ್ನು ಜೈವಿಕ ಸುರಕ್ಷತೆ ಮತ್ತು ವಿಷತ್ವ ಎಷ್ಟಿದೆ ಎನ್ನುವುದಕ್ಕಾಗಿ ಪರೀಕ್ಷಿಸಲಾಗಿದೆ
- ಸಸ್ಯ ಮತ್ತು ಪ್ರಾಣಿಗಳಿಗೆ ಇವು ಸುರಕ್ಷಿತವಾಗಿದೆ ಮತ್ತು ವಿಷಕಾರಿಯಲ್ಲ.
- ಸಿಂಪಡಣೆ ಮಾಡುವಾಗ ಮುಖಗವಸು ಮತ್ತು ಕೈಗವಸು ಹಾಕಿಕೊಂಡು ಸಿಂಪಡಣೆ ಮಾಡಬೇಕು.
- ನ್ಯಾನೋ ಯೂರಿಯಾವನ್ನು ಒಣಗಿದ ಹಾಗೂ ಕಡಿಮೆ ತಾಪಮಾನದ ಸ್ಥಳದಲ್ಲಿ ಜಾಗದಲ್ಲಿ ಶೇಖರಿಸಿಡಬೇಕು ಹಾಗೂ ಮಕ್ಕಳಿಗೆ ಸಿಗದ ಹಾಗೆ ಇಡಬೇಕು.

ಇಷ್ಟೆಲ್ಲಾ ಗೊತ್ತಾಯಿತಲ್ಲ! ಇನ್ನು ನೀವೇ ಪ್ರಶ್ನೆ ಕೇಳಿ?

ಗೋಧಿ ರಫ್ತಿಗೆ ಕೇಂದ್ರ ಹಸಿರು ನಿಶಾನೆ

ನವದೆಹಲಿ: 4.69 ಲಕ್ಷ ಟನ್‌ಗಳಷ್ಟು ಗೋಧಿ ರಫ್ತು ಮಾಡಲು ಭಾರತ ಅವಕಾಶ ನೀಡಿದೆ. ಮುಖ್ಯವಾಗಿ ಬಾಂಗ್ಲಾದೇಶ, ಫಿಲಿಪ್ಪೀನ್ಸ್, ತಾಂಜೇನಿಯಾ ಮತ್ತು ಮಲೇಷ್ಯಾ ದೇಶಗಳಿಗೆ ರಫ್ತು ಆಗಲಿದೆ ಎಂದು ಸರಕಾರದ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ಕೇಂದ್ರ ಸರಕಾರವು ಕಳೆದ ತಿಂಗಳಷ್ಟೇ ಗೋಧಿ ರಫ್ತು ನಿಷೇಧ ಮಾಡಿದೆ. ಇದರಿಂದಾಗಿ 17 ಲಕ್ಷ ಟನ್‌ಗಳಷ್ಟು ಗೋಧಿ ಬಂದರುಗಳಲ್ಲಿಯೇ ಉಳಿದಿದ್ದು, ಮುಂಗಾರು ಮಳೆಯಿಂದಾಗಿ ನಷ್ಟವಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಬಿಸಿಗಾಳಿಯಿಂದಾಗಿ ಉತ್ಪಾದನೆ ಪ್ರಮಾಣ ಕಡಿಮೆ ಆಗಿರುವುದು ಹಾಗೂ ಬೆಲೆಯು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿರುವುದರಿಂದ ಕೇಂದ್ರ ಸರಕಾರ ಗೋಧಿ ರಫ್ತಿನ ಮೇಲೆ ನಿಷೇಧ ಹೇರಿದೆ. ಮೇ 13 ಅಥವಾ ಅದಕ್ಕೂ ಮೊದಲು ಗೋಧಿ ಖರೀದಿಗೆ, ಬದಲಾಯಿಸಲು ಸಾಧ್ಯವಿಲ್ಲದ ಎಲ್‌ಒಸಿ ನೀಡಿದ್ದಲ್ಲಿ ರಫ್ತಿಗೆ ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್‌ನಲ್ಲಿ 14.6 ಲಕ್ಷ ಟನ್ ಪ್ರಮಾಣದ ಗೋಧಿ ರಫ್ತು ಮಾಡಲಾಗಿತ್ತು. ಮೇನಲ್ಲಿ ರಫ್ತು ಪ್ರಮಾಣ 11.3 ಲಕ್ಷ ಟನ್‌ಗಳಿಗೆ ಇಳಿಕೆ ಆಗಿದೆ.

04-06-2022 Vsv Pg 11

04-06-2022 Hd Pg 06

ನಾಳೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಚಾಲನೆ

ಕೋಟಿ ವೃಕ್ಷ ಆಂದೋಲನ

◆ ದಿಗಂತ ವರದಿ, ಬೆಂಗಳೂರು

ಕೃಷಿ ಇಲಾಖೆ ಹಾಗೂ ಜಲಾನಯನ ಇಲಾಖೆಯಿಂದ ಇದೇ ಮೊದಲ ಬಾರಿಗೆ ಜೂನ್ 5ರಂದು ಕೋಟಿ ವೃಕ್ಷ ಆಂದೋಲನ ಹಮ್ಮಿಕೊಳ್ಳಲಾಗಿದೆ.

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ತುಮಕೂರಿನಲ್ಲಿ ಕೋಟಿ ವೃಕ್ಷ ಆಂದೋಲನ ಹಮ್ಮಿಕೊಳ್ಳಲಾಗಿದ್ದು, ಆಂದೋಲನಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಚಾಲನೆ ನೀಡಲಿದ್ದಾರೆ. ರಾಜ್ಯದ ಎಲ್ಲಾ ಕೃಷಿ ಇಲಾಖೆ ಆವರಣ, ರೈತರ ಬದು ಹೊಲಗಳಲ್ಲಿ ಎಲ್ಲಾ ಸರ್ಕಾರಿ ಇಲಾಖೆ ಆವರಣಗಳಲ್ಲಿ ಸಸಿ ನೆಡುವ ಮೂಲಕ ಪರಿಸರ ಪ್ರೇಮ ಕಾಳಜಿಯನ್ನು ವ್ಯಕ್ತಪಡಿಸಬೇಕು. ಸಸಿಗಳನ್ನು ಬರಿ ನೆಡುವುದಷ್ಟೇ ಅಲ್ಲ ಅವುಗಳನ್ನು ಪೋಷಿಸಬೇಕು ಎಂದು ಸಚಿವರು ಮನವಿ ಮಾಡಿದ್ದಾರೆ.

ಜಲಾನಯನ ಅಭಿವೃದ್ಧಿ ಮೂಲಕ ಬರಗಾಲವನ್ನು ತಡೆಯುವಿಕೆ ಕಾರ್ಯಕ್ರಮ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0 ಹಾಗೂ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳು ಸರ್ಕಾರ ಪ್ರಮುಖ ಯೋಜನೆಗಳಾಗಿವೆ.



ನೆಡುತೋಪಲ್ಲಿ ಸಸಿ

ಪ್ರಸ್ತುತ 2022-23ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ ಎಲ್ಲಾ ಯೋಜನೆಗಳಲ್ಲಿ ವಿವಿಧ ಅರಣ್ಯ ಸಸಿಗಳಾದ ತೇಗ, ಸಿಲ್ವರ್ ಓಕ್, ಶ್ರೀಗಂಧ, ಹೊಂಗೆ , ಹೆಬ್ಬೇವು, ಬಿದಿರು, ಹೊಳೆಮತ್ತಿ, ಸೀಗೆ, ಮುತ್ತುಗ, ಸೀಮೆ ತಂಗಡಿ, ಗ್ಲೈರಿಸೀಡಿಯಾ, ಕತ್ತಾಳೆ, ಹಿಪ್ಪುನೇರಳೆ ಸೇರಿ ವಿವಿಧ ಜಾತಿಯ ಸಸಿ ಒಳಗೊಂಡಂತೆ ಒಟ್ಟು 1 ಕೋಟಿ ಸಸಿಗಳನ್ನು ರೈತರ ಜಮೀನು ಹಾಗೂ ಸಮುದಾಯ ನೆಡುತೋಪುಗಳಲ್ಲಿ ನೆಡಲು ಯೋಜನೆ ಹಾಕಿಕೊಳ್ಳಲಾಗಿದೆ.